ಹಸ್ತಾಂತರಣ, ಮರು ಹಂಚಿಕೆ ಮಾಡಲು ಕೋರಿ ಬಂದಿದ್ದ ಅರ್ಜಿಗಳ ಸಂಖ್ಯೆ ಎಷ್ಟು

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮರು ಹಸ್ತಾಂತರ/ಮರು ಹಂಚಿಕೆ ಮಾಡಿ ಹಕ್ಕು ಪ್ರಮಾಣ ಪತ್ರವನ್ನು ಎಷ್ಟು ರೆವಿನ್ಯೂ ನಿವೇಶನದಾರರಿಗೆ ಕೊಡಲಾಗಿದೆ?

ಇ) ಇನ್ನು ಉಳಿದ ನಿವೇಶನದಾರರು ಎಷ್ಟು? ಹಾಗೂ ಅವರಿಗೆ ಯಾವಾಗ ಹಕ್ಕು ಪ್ರಮಾಣ ಪತ್ರವನ್ನು ಕೊಡಲಾಗುವುದು? ಹಾಗೂ ಕೊಡದೇ ಇರಲು ಕಾರಣವೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):-

ಅ) ಈ ತನಕ ೧೦,೫೬೭ ಅರ್ಜಿಗಳು.

ಆ) ದಿನಾಂಕ ೮-೫-೧೯೮೬ ರಂದು ತಡೆಯಾಜ್ಞೆ ನೀಡುವುದಕ್ಕೆ ಮುಂಚೆ ೬೯೫೨ ನಿವೇಶನದಾರರಿಗೆ ಹಕ್ಕು ಪತ್ರ ಕೊಡಲಾಗಿದೆ.

ಇ) ಇನ್ನೂ ೬೬೧೫ ನಿವೇಶನದಾರರಿದ್ದು ಅವರಿಗೆ ಹಕ್ಕು ಪ್ರಮಾಣ ಪತ್ರವನ್ನು ಕೊಟ್ಟಿರುವುದಿಲ್ಲ. ಮರು ಹಂಚಿಕೆ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆಯಲ್ಲಿ ಅವಕಾಶವಿಲ್ಲವೆಂಬ ಬಗ್ಗೆ ಹಲವಾರು ಪ್ರಕರಣಗಳಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ನೀಡಿದ ತೀರ್ಪುಗಳ ಹಿನ್ನೆಲೆಯಲ್ಲಿ ಮರು ಹಂಚಿಕೆ ಮಾಡದಂತೆ ತಡೆಯಾಜ್ಞೆ ಜಾರಿಯಲ್ಲಿರುತ್ತದೆ.

ಜನತಾ ಮನೆ ಮತ್ತು ಇಂದಿರಾ ಆವಾಜ್ ಮನೆಗಳ ಬಗ್ಗೆ

೧೪೫೯ (೨೦೬೬) ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೮-೮೯, ೧೯೮೯-೯೦, ೧೯೯೦-೯೧ ಹಾಗೂ ೧೯೯೧-೯೨ನೇ ಸಾಲಿನಲ್ಲಿ ಅಪೂರ್ಣವಾಗಿರುವ ಹಾಗೂ ಪ್ರಾರಂಭ ಮಾಡದೇ ಇರುವ ಜನತಾ ಮನೆ, ಇಂದಿರಾ ಆವಾಜ್ ಮನೆಗಳ ಸಂಖ್ಯೆ ಎಷ್ಟು?

ಆ) ಸದರಿ ಅಪೂರ್ಣವಾಗಿರುವ ಹಾಗೂ ಪ್ರಾರಂಭಿಸದೇ ಇರುವ ಮನೆಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಹಣವೆಷ್ಟು?

ಇ) ಈ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

	ಅಪೂರ್ಣಗೊಂಡ ಮನೆಗಳು		ಪ್ರಾರಂಭ ಮಾಡದೇ ಇರುವ ಮನೆಗಳು	
ವರ್ಷ	ಜನತಾ	ಇಂದಿರಾ ಆವಾಜ್ ಯೋಜನೆ	ಜನತಾ	ಇಂದಿರಾ ಆವಾಜ್ ಯೋಜನೆ
೧೯೮೮-೮೯	೪೨೫೬೭	೧೪	ಯಾವುದೂ ಇಲ್ಲ	

೧೯೮೯-೯೦	೪೭೯೬೧	೨೧೭
೧೯೯೦-೯೧	—	೭೪೭
೧೯೯೧-೯೨	—	೫೧೮೬೩
ಜುಮ್ಲಾ	೯೦೫೨೮	೬೧೬೪

(೧೯೯೦-೯೧ ಹಾಗೂ ೧೯೯೧-೯೨ ಸಾಲಿನ ಜನತಾ ಮನೆಗಳನ್ನು 'ಆಶ್ರಯ' ಯೋಜನೆಯಡಿಯಲ್ಲಿ ವಿಲೀನಗೊಳಿಸಲಾಗಿದೆ)

ಆ) ಅಪೂರ್ಣವಾಗಿರುವ ಜನತಾ ಮನೆಗಳನ್ನು ಪೂರ್ಣಗೊಳಿಸಲು ರೂ. ೪೦೧೪.೨೫ ಲಕ್ಷಗಳು ಬೇಕಾಗಿದೆ. ಅಪೂರ್ಣವಾಗಿರುವ ಇಂದಿರಾ ಆವಾಜ್ ಯೋಜನೆ ಮನೆಗಳನ್ನು ಪೂರ್ಣಗೊಳಿಸಲು ರೂ. ೧೨.೭೦೭ ಲಕ್ಷಗಳು ಬೇಕಾಗಿದೆ.

ಇ) ಮನೆಗಳ ನಿರ್ಮಾಣದ ಪ್ರಗತಿಯ ಮೇರೆಗೆ ಹಣ ಬಿಡುಗಡೆ ಮಾಡಲಾಗುವುದು.

ಆಶ್ರಯ ಯೋಜನೆ ಬಗ್ಗೆ

೧೪೭೨. (೨೦೯೦) ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು 'ಆಶ್ರಯ' ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುತ್ತಿದೆ? (ಜಿಲ್ಲಾವಾರು ಅಂಕಿ ಅಂಶ ನೀಡುವುದು).

ಆ) ಇದಕ್ಕಾಗಿ ಎಷ್ಟು ಹಣ ಖರ್ಚಾಗುತ್ತದೆ. ಇದುವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು? (ಜಿಲ್ಲಾವಾರು ಅಂಕಿ ಅಂಶ ನೀಡುವುದು)

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಒಟ್ಟು ೨,೩೫,೦೦೦ ಮನೆಗಳನ್ನು ಕಟ್ಟಲು ಯೋಜಿಸಲಾಗಿದೆ. ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ೧೦೦೦ ಮನೆಗಳನ್ನು ನಿರ್ಮಿಸಲು ಯೋಜಿಸಿದೆ.

ಆ) ಇದಕ್ಕಾಗಿ ಒಟ್ಟು ೪೧೯.೫೦ ಕೋಟಿ ರೂ. ಗಳು ಖರ್ಚಾಗುತ್ತದೆ.

ಇದುವರೆಗೆ ೧೭.೫೦ ಕೋಟಿ ರೂ. ಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಳಿಗೆ ಸರ್ಕಾರವು ಬಿಡುಗಡೆ ಮಾಡಲಾಗಿದ್ದು, ಈ ಹಣದಲ್ಲಿ ಕರ್ನಾಟಕ ಗೃಹ ಮಂಡಳಿಯು ೫.೭೦ ಕೋಟಿ ರೂ. ಗಳನ್ನು ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಬೆಂಗಳೂರು ನಗರಗಳಿಗೆ ಮರು ಹಂಚಿಕೆ ಮಾಡಿದೆ.

ಕಾವೇರಿ ೩ನೇ ಹಂತದ ಯೋಜನೆ ಜಾರಿಯ ಬಗ್ಗೆ

೨೧೫೯. ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?